

ಮರ್ಯಾದಿ ಬ್ಯಾಡೇನು ನಿಮಗೆಲ್ಲಾ ಇರೂವಂಗ್?'

'ಬೇಕಲ್ಲಾ, ಯಾಕ ಬ್ಯಾಡಾ. ಅದಕ್ಕ ನಾನೇನು ಮಾಡ್ಬೇಕು ಹೇಳು?'

'ಈಗ ಹ್ಯಾಂಗ್ ತಂಗೀ ಅಂತ ಒಪ್ಕೊಂಡೀಯಲ್ಲಾ, ಹಂಗೇ ನಿಮ್ಮ ಸಮಾಜ ಮತ್ತ ಬಳಗದ ಮಂದೀ ಮುಂದಾನೂ ಒಪ್ಕೊ. ಅಷ್ಟೇ ಸಾಕು'

'ಇಷ್ಟೆನಾ, ಆಯ್ತು ತುಗೊ' ಮಾತುಕೊಟ್ಟ. ಅವಳ ಹೃದಯಕ್ಕಾಗಿರುವ ಗಾಯದ ಮುಂದೆ, ತಾನು ಎದುರಿಸಬಹುದಾದ ಅಹಿತ ಪ್ರಸಂಗಳು ತೀರ ಯಃಕಶ್ಚಿತ್ತ ಅಂದುಕೊಂಡಿದ್ದ ಆಗ. ಹೇಗೆ ಹೇಳಬೇಕು? ಯಾರು ಹೇಗೆ ಹೇಗೆ ಪ್ರತಿಕ್ರಿಯಿಸುತ್ತಾರೊ? ಅವರನ್ನು ಸಮಜಾಯಿಸೋದು ಯಾವ ರೀತಿ? ಯೋಚಿಸಿ ಯೋಚಿಸಿ, ಹೈರಾಣಗೊಂಡ. ಕೊನೆಗೆ ಧೈರ್ಯ ತಂದುಕೊಂಡು, ಪದ್ಮಳ ಇಚ್ಛೆಯನ್ನು ಮನೆಯವರ ಮುಂದೆ ಹೇಳಲೇಬೇಕಾಯಿತು. ಹೇಳಿಬಿಟ್ಟ. ಅಷ್ಟಕ್ಕೇ ಮನೆ ಅಂಬೋದು ರಣರಂಗವಾಗಿ... ಕುದಿಯುವ ಹೊಂಡವಾಗಿದೆ...

'ರಾಮ್ ರಾಮಾ! ನಿಮ್ಮಪ್ಪನ ರಂಡೀ ಮಗಳೇನೊ ಈಕಿ' ಅವ್ವ ಹಣೆಹಣೆ ಬಡಿದುಕೊಂಡಳು, ರೋದಿಸತೊಡಗಿದಳು. ಲಕ್ಷ್ಮೀ ಬಿಕ್ಕಳಿಸಿದಳು.

'ಈ ಹಾದರಗಿತ್ತಿ ನಮ್ಮವಳಂತ ಸಮಾಜ ಹಿರೀಯರು, ಬಳಗದವರ ಮುಂದೆಲ್ಲಾ ಒಪ್ಕೋಬೇಕಂತೇನೊ!' ಕುದಿಯತೊಡಗಿದಳು ಅವ್ವ.

'ಒಪ್ಪಿಕೊಂಡ್ರ ಏನ್ತಪ್ಪಾಗ್ತದವ್ವಾ?' ಕೇಳಿದರೆ, 'ಹೂಂ ಅಪ್ಪನ ಕಳ್ಳಬಳ್ಳಿ ಅಂಬೊ ಮಮಕಾರ ನೋಡು! ಎಲ್ಲಿ ಹೋಗ್ತದ' ಲಕ್ಷ್ಮಿಯ ಕೊಂಕುನುಡಿ. ಆ ಮಾತಿಗೆ ಬಂದ ಕೋಪಕ್ಕೆ, ಫಟಾರ್ ಎಂದು ಅವಳ ಕಪಾಳಕ್ಕೆ ಹೊಡೆದ.

'ಆ ನಿಮ್ಮಪ್ಪ ದೇಶಪಾಂಡೆ ಶ್ಯಾಮರಾಯನಂಗ ನಮ್ಮಪ್ಪೇನು ಕಳ್ಳಹಾದರಾ ಮಾಡ್ಲಿಲ್ಲಾ, ತಿಳ್ಕೋ'

'ಏ ಮನೆಹಾಳ ರಂಡೇಗಂಡಾ! ಹೆಣ್ಣುಕೊಟ್ಟ ಮಾವಂಗೇ ಅಂತೀಯಲ್ಲೊ. ಸತ್ಯಾನಾಶಾಗಿ ಹೋಗ್ತಿ. ಮೂರಕಾಸಿಗೆ ಸೆರಗ ಹಾಸೊ ಬಣ್ಣದಾಕಿ. ಯಾರ ಹಾದರದ ಪಿಂಡೋ! ರಾಮ ರಾಮಾ... ಆಕೀ ನಮ್ಮ ಬಳಗದಾಕೀ ಹ್ಯಾಂಗ್ ಆಗ್ತಾಳೊ? ಏಯ್ ವಸಂತಾ! ಕೇಳ್ಸಿಕೋ, ನೀನೆಲ್ಲಾದ್ರೂ ತಂಗಿ ಅಂತ ಆ ಬಣ್ಣದಾಕೀನ ಒಪ್ಪಿಕೊಂಡಿ ಅಂತಂದ್ರ, ನಾವ್ಯಾರೂ ಜೀವಸಹಿತ ಇರಾಂಗಿಲ್ಲಾ ಹಾಂ!' ಅವ್ವ ಚಾಮುಂಡಿ ಅವತಾರ ತಾಳಿ, 'ನಾವಂದ್ರ ಏನು? ನಮ್ಮ ಧರ್ಮಾ ಅಂದ್ರ ಏನು? ಖಬರ ಅದ್ ಏನೊ?' ಎದೆ ಬಡಿದುಕೊಳ್ಳುತ್ತ ದೊಡ್ಡಧ್ವನಿಯಲ್ಲಿ ಅಳತೊಡಗಿದಳು.

'ಅವ್ವಾ, ನನಗೊತ್ತಿರೋದು ಒಂದೇ ಧರ್ಮ. ಅದು ಮಾನವ ಧರ್ಮ'

'ಬೆಂಕಿಬಿತ್ತು ನಿನ್ನ ಸುಡುಗಾಡ ಧರ್ಮಕ್ಕ...ನಾವು ಬ್ರಾಂಬ್ರು. ಮೇಲ್ವರ್ಣದ ಜನಾ. ಆಕೀ ಪಾತರದವಳು, ಬಣ್ಣಾ ಬಳ್ಕೊಂಡು ಕುಣಿಯೋಳು, ರೊಕ್ಕಕ್ಕ ಸೆರಗಾ ಹಾಸೋಳು'

'ಅವ್ವಾ, ಹಂಗೆಲ್ಲಾ ಮತ್ತೊಬ್ಬರ ಬಗ್ಗೆ ಹಗುರ ಮಾತಾಡಬ್ಯಾಡಾ. ಅದೂ ಅಲ್ಲದ, ಪದ್ಮಾ ನಮ್ಮಪ್ಪನ...'